# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 893/2024**

**CW : 08 PW: 05**

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 28.03.2026

| | |
|---|---|
| ಹೆಸರು | : ಶರಣಗೌಡ ಬಿರಾದಾರ |
| ತಂದೆಯ ಹೆಸರು | : ಮಲ್ಲನಗೌಡ |
| ವಯಸ್ಸು | : 35 |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಶಹಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ನಿರೀಕ್ಷಕರು ಎಂದು 23/01/2021 ರಿಂದ 28/09/2025 ರವರೆ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣದಲ್ಲಿ ದಿ: 11/06/2024 ರಂದು ಕಡತವನ್ನು ನಾನು ಚಾಸಾ-7 ರವರಿಂದ ಪಡೆದುಕೊಂಡು ಮುಂದಿನ ತನಿಖೆಯನ್ನು ಕೈಗೊಂಡಿರುತ್ತೇನೆ. ದಿ: 25/06/2024 ರಂದು ಮನೆಯ ಮಾಲೀಕತ್ವವನ್ನು ಅರಿಯಲು ಗ್ರಾಮ ಪಂಚಾಯತ ಕಾರ್ಯಾಲಯ ಮರತೂರು ಇವರಿಗೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅದೇ ದಿನದಂದು ಈ ವಿಚಾರವಾಗಿ ಮನೆಯ ಮಾಲೀಕತ್ವವನ್ನು ತೋರಿಸಲು ಸಮರ್ಪಕವಾದ ದಾಖಲೆಗಳು ಇರುವುದಿಲ್ಲ ಎಂದು ವರದಿಯನ್ನು ನೀಡಿದ್ದು ಇರುತ್ತದೆ. ದಿ: 15/06/2024 ರಂದು ದಾಳಿಯಲ್ಲಿ ಭಾಗಿಯಾದ ಚಾಸಾ-4 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನದಂದು ನಾನು ರಾಸಾಯನಿಕ ಪರೀಕ್ಷೆಗೆ ಹೋಗಿರುವ ಚಾಸಾ-5 ಇವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ಸಾಕಷ್ಟು ಸಾಕ್ಷ್ಯಾಧಾರಗಳಿರುವ ಕಾರಣ ಆರೋಪಿತನ ವಿರುದ್ಧ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಆರೋಪಿತನ ವಿರುದ್ಧ ನಾನು ದಿ: 15/08/2024 ರಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದು ಇರುತ್ತದೆ.

ಮನೆಯ ಮಾಲೀಕತ್ವವನ್ನು ಅರಿಯಲು ಗ್ರಾಮ ಪಂಚಾಯತ ಕಾರ್ಯಾಲಯ ಮರತೂರು ಇವರಿಗೆ ಸಲ್ಲಿಸಿದ ಅರ್ಜಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.7 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.7 (ಎ) ಎಂದು, ರಾಸಾಯನಿಕ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.8 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.8 (ಎ)

ಎಂದು, ನಿ.ಪಿ.7 ಕ್ಕೆ ಸಲ್ಲಿಸಿರುವ ಪ್ರತ್ಯುತ್ತರದ ವರದಿಯನ್ನುನೋಡಿ ಗುರುತಿಸಿದ್ದು, ಅದನ್ನು ನಿ.ಪಿ.9 ಎಂದು ನಿಶಾನೆಗೊಳಿಸಲಾಯಿತು. ಈಗಾಗಲೇ ನಿಶಾನೆಗೊಳಿಸಿರುವ ಮು.ಮಾ.1 ಮತ್ತು 2 ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಇರುತ್ತದೆ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ನಿ.ಪಿ.8 ರ ಮೇಲೆ ನಮ್ಮ ಠಾಣಾ ವತಿಯಿಂದ ಮೊಹರು ಮತ್ತು ರುಜು ಇರುವುದಿಲ್ಲ ಎಂದರೆ ಸರಿ. ನಿ.ಪಿ.7 ರಲ್ಲಿ ಪಂಚಾಯತಿ ವತಿಯಿಂದ ಯಾವುದೇ ಮೊಹರು ಹಾಗೂ ರುಜು ಇರುವುದಿಲ್ಲ ಎಂದರೆ ಸರಿ. ನಿ.ಪಿ.9 ರಲ್ಲಿ ನಮ್ಮ ಠಾಣಾ ವತಿಯಿಂದ ಮೊಹರು ಮತ್ತು ರುಜು ಇರುವುದಿಲ್ಲ ಎಂದರೆ ಸರಿ. ದಾಳಿಯಲ್ಲಿ ಭಾಗಿಯಾದ ಚಾಸಾ-4 ಮತ್ತು 5 ಇವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಪೆರಿಯಾಸನ್ನು ನೋಡಲಾಗಿ ದೋಷಾರೋಪಣ ಪಟ್ಟಿಯನ್ನು 19/07/2024 ರಂದು ಸಲ್ಲಿಸಲಾಗಿ ಎಂದು ನಮೂದು ಇರುತ್ತದೆ ಎಂದರೆ ಸರಿ. ಅಂತಿಮ ವರದಿ ದಿನಾಂಕವನ್ನು 15/08/2024 ರಂದು ನಮೂದು ಮಾಡಿದ್ದು ಇರುತ್ತದೆ ಎಂದರೆ ಸಾಕ್ಷಿದಾರರು ಅದು ತಾಂತ್ರಿಕ ದೋಷದಿಂದ ಆಗಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಮು.ಮಾ.1 ಮತ್ತು 2 ರಂತೆ ಖಾಲಿ ಬಾಟಲಿಗಳು ಎಲ್ಲೆಂದರಲ್ಲಿ ಸಿಗುತ್ತವೆ ಎಂದರೆ ಸರಿ.

ಸದರಿ ಮುದ್ದೆ ಮಾಲಿಗೂ ಆರೋಪಿಗೂ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಸರಿಯಾದ ತನಿಕೆಯನ್ನು ಕೈಗೊಳ್ಳದೇ ಒಂದು ಲೋಪ ಪೂರಿತ ದೋಷಾರೋಪಣ ಪಟ್ಟಿಯನ್ನು ಆರೋಪಿತನ ವಿರುದ್ದ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ಇವರು ನಮ್ಮ ಮೇಲಾಧಿಕಾರಿಯಾಗಿದ್ದು ಅವರನ್ನು ಬೆಂಬಲಿಸಲು ನಾನು ಒಂದು ಖೊಟ್ಟಿ ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**